ರಾಜ್ಯ ನೋಟ

# ಕಾಂಗ್ರೆಸ್-ಜೆಡಿಎಸ್ ಪರೋಕ್ಷ ಹೊಂದಾಣಿಕೆ ನಿಶ್ಚಿತ ?

ರಾಜ್ಯವು ಇನ್ನೊಂದು ವರ್ಷದೊಳಗೆ ವಿಧಾನಸಭಾ ಚುನಾವಣೆ ಎದುರಿಸಲಿದೆ. ಮುಂದಿನ ಮೇ ತಿಂಗಳ ಒಳಗಾಗಿ ಚುನಾವಣಾ ಆಯೋಗವು ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು ನಿಶ್ಚಿತ. ಹೀಗಾಗಿ ಎಲ್ಲಾ ಮೂರು ಪ್ರಮುಖ ರಾಜಕೀಯ ಪಕ್ಷಗಳಲ್ಲೂ ಚಟುವಟಿಕೆಗಳು ಗರಿಗೆದರಿವೆ. ಆಡಳಿತಾರೂಢ ಕಾಂಗ್ರೆಸ್ ಪಕ್ಷಕ್ಕೆ ಮುಂದಿನ ಚುನಾವಣೆ ಬಹಳ ಮಹತ್ವದ್ದಾಗಿರುವುದರಿಂದ ಆ ಪಕ್ಷದಲ್ಲಿ ಇತರ ಪಕ್ಷಗಳಿಗಿಂತ ಹೆಚ್ಚು ರಾಜಕೀಯ ವಿದ್ಯಮಾನಗಳು ಘಟಿಸುತ್ತಿವೆ. ಹೈಕಮಾಂಡ್ ಕಡೆಯಿಂದ ರಾಜ್ಯ ಉಸ್ತುವಾರಿಯನ್ನು ಬದಲು ಮಾಡುವ ಮೂಲಕ ಕಾಂಗ್ರೆಸ್‌ನಲ್ಲಿ ಚುನಾವಣಾ ತಯಾರಿ ಚುರುಕಾಗಿದೆ. ಮುಂದಿನ ಕೆಲವು ತಿಂಗಳಲ್ಲಿ ಕಾಂಗ್ರೆಸ್ ಪಕ್ಷದ ವಿದ್ಯಮಾನಗಳು ಹೊಸ ಸಮಸ್ಯೆಗಳನ್ನು ಸೃಷ್ಟಿಸಿದರೆ ಅದೇನೂ ಅಚ್ಚರಿಯ ಸಂಗತಿಯಾಗದು.

ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಅರ್ಹರನ್ನು ಆಯ್ಕೆ ಮಾಡುವುದು ವಿಧಾನ ಸಭೆ ಚುನಾವಣೆಯನ್ನು ಗೆಲ್ಲುವುದಕ್ಕಿಂತ ದೊಡ್ಡ ಸವಾಲಾಗಿ ಪಕ್ಷದ ವರಿಷ್ಠರ ಮುಂದೆ ನಿಂತಿದೆ. ಯಾರನ್ನೇ ಆಯ್ಕೆ ಮಾಡಿದರೂ ಬಂಡಾಯ ನಿಶ್ಚಿತ. ಬಂಡಾಯವಿಲ್ಲದಿದ್ದರೂ ಅಸಹಕಾರ ಇದ್ದೇ ಇರುತ್ತದೆ ಎನ್ನುವ ಕಾರಣಕ್ಕೆ ಹೈಕಮಾಂಡ್ ಅಳೆದು ಸುರಿದು ಯಾರಿಗೆ ಪಟ್ಟ ಕಟ್ಟುತ್ತದೆ ಎನ್ನುವ ಕುತೂಹಲ ಸಾಕಷ್ಟು ಕಾಲ ಉಳಿಯಲಿದೆ.

ಕಾಂಗ್ರೆಸ್ ಪಕ್ಷವು ಕರ್ನಾಟಕವನ್ನು ಕಳೆದುಕೊಂಡರೆ ಬಿಜೆಪಿಯ ಕಾಂಗ್ರೆಸ್ ಮುಕ್ತ ಭಾರತದ ಗುರಿ ಬಹುತೇಕ ಈಡೇರಿದಂತೆಯೇ ಸರಿ. ಆದ್ದರಿಂದಲೇ ಕಾಂಗ್ರೆಸ್ ವರಿಷ್ಠರು ಬೇರೆಲ್ಲಾ ರಾಜ್ಯವನ್ನು ಮರೆತು ಕರ್ನಾಟಕದ ಮೇಲೆ ಗಮನ ಹರಿಸುವುದು ನಿಶ್ಚಿತ. ಚುನಾವಣೆಯಲ್ಲಿ ನಾಯಕತ್ವದ ಗೊಂದಲ ಬಗೆಹರಿಸಲು ಪಕ್ಷ ಬಹಳಷ್ಟು ಶ್ರಮ ಹಾಕುತ್ತಿದೆ. ಆದರೆ ಸ್ವತಃ ಸಿದ್ದರಾಮಯ್ಯ ಅವರು ತಮ್ಮದೇ ನಾಯಕತ್ವ ಎಂದು ಸಾರಿದ್ದಾರೆ. ಇದು ಪಕ್ಷದೊಳಗಿನ ಸಮಸ್ಯೆಯನ್ನು ಬಿಗಡಾಯಿಸುವಂತೆ ಮಾಡಿದೆ. ಆದರೂ ಸಿದ್ದರಾಮಯ್ಯ ಹೊರತಾದ ನಾಯಕತ್ವದತ್ತ ಹೈಕಮಾಂಡ್ ಗಮನ ನೀಡುವ ಸಂಭವ ಕಡಿಮೆ.

ಬಿಜೆಪಿ ಕೂಡಾ ಚುನಾವಣೆಯ ತಯಾರಿಯನ್ನು ಚುರುಕುಗೊಳಿಸಿದೆ. ಮೈಸೂರಿನಲ್ಲಿ ನಡೆದ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಪಕ್ಷದ ಮುಖಂಡರೆಲ್ಲರೂ ಏಕತೆಯ ಪ್ರದರ್ಶನ ಮಾಡಿದ್ದು ಪಕ್ಷದ ಕಾರ್ಯಕರ್ತರಲ್ಲಿ ಈಗ ಯಾವುದೇ ಗೊಂದಲ ಉಳಿದಂತೆ ಕಾಣುತ್ತಿಲ್ಲ. ಯಡಿಯೂರಪ್ಪ ನಾಯಕತ್ವದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲು ವರಿಷ್ಠರೂ ಕೂಡ ಸಾಕಷ್ಟು ಮೊದಲೇ ಗಮನಹರಿಸಿದ್ದಾರೆ. ಸ್ವತಃ ಅಮಿತ್ ಶಾ ಅವರು ರಾಜ್ಯದಲ್ಲಿ ಬಂದು ಕುಳಿತುಕೊಳ್ಳುವ ಯೋಚನೆಯಿದೆ ಎಂದರೆ ಬಿಜೆಪಿ ವರಿಷ್ಠರು ಈ ಚುನಾವಣೆಯನ್ನು ಅದೆಷ್ಟು ಗಂಭೀರವಾಗಿ ಪರಿಗಣಿಸಿದ್ದಾರೆ ಎನ್ನುವುದು ಅರ್ಥವಾಗುತ್ತದೆ. ರಾಜ್ಯದ ಜನರೂ ಕೂಡಾ ಕಾಂಗ್ರೆಸ್‌ಗೆ ಪರ್ಯಾಯವೆಂದರೆ ಬಿಜೆಪಿ ಎಂದು ಯೋಚಿಸುತ್ತಿರುವುದು ಪಕ್ಷಕ್ಕೆ ಸಹಕಾರಿಯಾಗಿದೆ.

ಇನ್ನು ಜಾತ್ಯತೀತ ಜನತಾ ದಳದ ನಡೆ ಮಾತ್ರ ನಿಗೂಢವಾಗಿದೆ. ಜೆಡಿಎಸ್ ನಾಯಕರು ಎರಡೂ ರಾಷ್ಟ್ರೀಯ ಪಕ್ಷಗಳ ವಿರುದ್ಧ ಹೇಳಿಕೆಗಳನ್ನಂತೂ ನೀಡುತ್ತಿದ್ದಾರೆ. ಆದರೆ ಕಾಂಗ್ರೆಸ್ ಮೇಲೆ ಸ್ವಲ್ಪ ಮಟ್ಟಿನ ಪ್ರೀತಿ ಆ ಪಕ್ಷದ ಮುಖಂಡರಿಗಿದೆ ಎನ್ನುವುದು ಅವರ ನಡವಳಿಕೆಯಿಂದ ಅರ್ಥವಾಗುತ್ತಿದೆ. ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬರುವುದು ಅದೆಷ್ಟು ಕಷ್ಟವಿದೆ ಎನ್ನುವುದನ್ನು ತಿಳಿದಿರುವ ಜೆಡಿಎಸ್ ನಾಯಕರು ಕಾಂಗ್ರೆಸ್ ಪಕ್ಷವನ್ನು ಮೇಲ್ನೋಟಕ್ಕೆ ಮಾತ್ರವೇ ಟೀಕಿಸುತ್ತಿದ್ದಾರೆ. ಅದಲ್ಲದೇ ಚುನಾವಣೆಯಲ್ಲಿ ಕಾಂಗ್ರೆಸ್‌ಗಿಂತ ಬಿಜೆಪಿಗೆ ಹೆಚ್ಚು ಜನಮನ್ನಣೆ ಸಿಗುವ ವಾತಾವರಣವಿದೆ. ಇದರಿಂದ ಜೆಡಿಎಸ್‌ಗೆ ಮುಂದಿನ ಚುನಾವಣೆಯ ನಂತರ ಆಟವಾಡಲು ಬಿಜೆಪಿಗಿಂತ ಕಾಂಗ್ರೆಸ್ ಪಕ್ಷವೇ ಅಗತ್ಯವೆನಿಸಿದೆ. ರಾಹುಲ್ ಗಾಂಧಿ ಅವರೂ ಜೆಡಿಎಸ್ ನಾಯಕರನ್ನು ಟೀಕಿಸದಂತೆ ತಾಕೀತು ಮಾಡಿದ್ದಾರೆ ಎನ್ನಲಾಗಿದೆ. ದೇವೇಗೌಡರಂತೂ ಸಿದ್ದರಾಮಯ್ಯ ಅವರನ್ನು ಟೀಕಿಸಿ ವರ್ಷವೇ ಕಳೆದಿದೆ. ಇವೆಲ್ಲವೂ ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ಪರೋಕ್ಷ ಸಹಕಾರ ಇರುವುದನ್ನು ದೃಢಪಡಿಸಿದೆ.

ಕಾಂಗ್ರೆಸ್ ಮತ್ತು ಜೆಡಿಎಸ್ ಹೊಂದಾಣಿಕೆಯ ರಾಜಕೀಯವನ್ನು ಎದುರಿಸುವುದು ಹೇಗೆ ಎನ್ನುವುದೇ ಈಗ ಬಿಜೆಪಿ ಮುಂದಿರುವ ನಿಜವಾದ ಸವಾಲು. ಅನೇಕ ಕ್ಷೇತ್ರಗಳಲ್ಲಿ ಆ ಎರಡೂ ಪಕ್ಷದ ಅಭ್ಯರ್ಥಿಗಳಿದ್ದರೂ ಒಬ್ಬರು ನೆಪ ಮಾತ್ರಕ್ಕೆ ಸ್ಪರ್ಧೆಯಲ್ಲಿರುವ ಸಾಧ್ಯತೆಯೇ ಹೆಚ್ಚು. ಈ ರಾಜಕೀಯವನ್ನು ಅರಿತು ಬಿಜೆಪಿ ತಂತ್ರಗಾರಿಕೆ ರೂಪಿಸಿದರೆ ಮಾತ್ರವೇ ಜೆಡಿಎಸ್ ಮಾಡಬಹುದಾದ ಹಾನಿಯನ್ನು ತಪ್ಪಿಸಬಹುದು.

ಮೋದಿಯವರ ಜನಪ್ರಿಯತೆ ಮತ್ತು ಯಡಿಯೂರಪ್ಪನವರ ನಾಯಕತ್ವ ಇವೆರಡೂ ತಮಗೆ ಹಾನಿ ಮಾಡುವುದು ಖಚಿತ ಎನ್ನುವುದನ್ನು ಅರಿತಿರುವ ಕಾಂಗ್ರೆಸ್ ನಾಯಕರಿಗೂ ಜೆಡಿಎಸ್‌ನ ಕೆಲವು ಶರತ್ತುಗಳನ್ನು ಒಪ್ಪಲೇಬೇಕಾದ ಅನಿವಾರ್ಯತೆಯಿದೆ. ದೇವೇಗೌಡರು ಅಂತಹ ಸನ್ನಿವೇಶ ಸೃಷ್ಟಿಸದೇ ಇರುವುದಿಲ್ಲ. ಬಿಜೆಪಿಯನ್ನು ಎದುರಿಸಬೇಕಾದರೆ ಯಾವುದೇ ರೀತಿಯ ಹೊಂದಾಣಿಕೆ ಅಗತ್ಯವೆನ್ನಿಸಿದರೆ ಅದಕ್ಕೆ ಬೇಕಾದ ಎಲ್ಲಾ ಯೋಜನೆಗಳೂ ಸಿದ್ದರಾಮಯ್ಯ ಅವರಲ್ಲೂ ಇದ್ದಂತೆ ಕಾಣುತ್ತಿದೆ. ಹೀಗಾಗಿ ಕಾಂಗ್ರೆಸ್ ಹೈಕಮಾಂಡಿಗೆ ಸಿದ್ದರಾಮಯ್ಯ ನಾಯಕತ್ವವನ್ನು ಮುಂದುವರಿಸುವುದು ಅನಿವಾರ್ಯವಾಗುವ ಸಂಭವವಿದೆ.

ಕಾಂಗ್ರೆಸ್ ಮತ್ತು ಜೆಡಿಎಸ್ ಹೊಂದಾಣಿಕೆಯ ರಾಜಕೀಯವನ್ನು ಎದುರಿಸುವುದು ಹೇಗೆ ಎನ್ನುವುದೇ ಈಗ ಬಿಜೆಪಿ ಮುಂದಿರುವ ನಿಜವಾದ ಸವಾಲು. ಅನೇಕ ಕ್ಷೇತ್ರಗಳಲ್ಲಿ ಆ ಎರಡೂ ಪಕ್ಷದ ಅಭ್ಯರ್ಥಿಗಳಿದ್ದರೂ ಒಬ್ಬರು ನೆಪ ಮಾತ್ರಕ್ಕೆ ಸ್ಪರ್ಧೆಯಲ್ಲಿರುವ ಸಾಧ್ಯತೆಯೇ ಹೆಚ್ಚು.



ಎಸ್. ಶಾಂತಾರಾಮ್